34 ಮೀಟರ್ ಎತ್ತರವಿರುವ ಕಾಪು ದೀಪ ಸ್ಥಂಭವನ್ನು 1935 ರಲ್ಲಿ ಅಂದಿನ ಬ್ರಟಿಷ್ ಸರ್ಕಾರ ನಿರ್ಮಿಸಿದೆ ಎಂದು ಕಾಪು ದೀಪ ಸ್ಥಂಭದ ಉಸ್ತುವಾರಿ ನೋಡಿಕೊಳ್ಳುವ ವ್ಯವಸ್ಥಾಪಕರು ತಿಳಿಸಿರುತ್ತಾರೆ.

ಆ) ಪ್ರವಾಸೋದ್ಯಮ ಕೇಂದ್ರವಾಗಿ ಈಗಾಗಲೇ ಲಕ್ಷಾಂತರ ಜನರನ್ನು ಆಕರ್ಷಿಸುತ್ತಿರುವ ಈ ದೀಪಸ್ಥಂಬದ ಅಭಿವೃದ್ಧಿಗೆ ಸರಕಾರ ಯಾವ ಯೋಜನೆಯನ್ನು ಹಮ್ಮಿಕೊಂಡಿದೆ;

ಕಾಪು ದ್ವೀಪಸ್ತಂಬದ ಬಳಿ ಪ್ರವಾಸಿ ಸೌಲಭ್ಯ ಕಲ್ಪಿಸಲು ಇಲಾಖೆಯು ರೂ. 55.00 ಲಕ್ಷಗಳನ್ನು ಉಡುಪಿ ಜಿಲ್ಲಾಡಳಿತಕ್ಕೆ ಬಿಡುಗಡೆ ಮಾಡಿರುತ್ತದೆ. ಸದರಿ ಮೊತ್ತದಲ್ಲಿ ಕಾಲುಪಥ ನಿರ್ಮಾಣ, ಲ್ಯಾಂಡ್ ಸ್ಕೇಪಿಂಗ್, ಗಾರ್ಡನ್ ಲೈಟಿಂಗ್, ಸಿವಿಲ್ ಕಾಮಗಾರಿಗಳು ಹಾಗು ವಾಹನ ನಿಲುಗಡೆ ಸೌಲಭ್ಯಗಳನ್ನು ಕೈಗೊಳ್ಳಲಾಗುವುದು.

ಇ) ಕಾಪು ದೀಪಸ್ಥಂಭ ನಿರ್ವಹಣೆಯಲ್ಲಿ ಕರ್ನಾಟಕ ಸರ್ಕಾರದ ಪಾತ್ರವೇನು;

ಇದರ ನಿರ್ವಹಣೆಯು ಕೇಂದ್ರ ಸರ್ಕಾರಕ್ಕೆ ಸೇರಿರುತ್ತದೆ. ಪ್ರವಾಸೋದ್ಯಮ ವ್ಯಾಪ್ತಿಗೆ ಬರುವುದಿಲ್ಲ. ಪ್ರವಾಸಿಗರ ಅನುಕೂಲಕ್ಕಾಗಿ ಮೇಲಿನಂತೆ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ.

ಈ) ಈ ದೀಪಸ್ಥಂಭದ ವಾರ್ಷಿಕ ಆರ್ಥಿಕ ಆಧಾಯ ಹಾಗೂ ಖರ್ಚುಗಳೆಷ್ಟು?

ಇದರ ಆದಾಯ ಮತ್ತು ವೆಚ್ಚಗಳು ರಾಜ್ಯ ಸರ್ಕಾರದ ವ್ಯಾಪ್ತಿಗೆ ಅಥವಾ ಇಲಾಖಾ ವ್ಯಾಪ್ತಿಗೆ ಬರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (272)237
ಮಾನ್ಯ ಸದಸ್ಯರ ಹೆಸರು : ಶ್ರೀ ನಾಯ್ಕ ಜೆ.ಡಿ
ಉತ್ತರಿಸುವ ಸಚಿವರು : (ಶ್ರೀ ಸಿ.ಎಂ.ಉದಾಸಿ)
: ಲೋಕೋಪಯೋಗಿ ಸಚಿವರು

ಅ ಕಳೆದ 3 ವರ್ಷಗಳಿಂದ ಜಿಲ್ಲಾ ಪಂಚಾಯತ್, ಜಿಲ್ಲಾ ಮುಖ್ಯ ರಸ್ತೆಗಳ ಪೈಕಿ ಎಷ್ಟು ಕಿ.ಮೀ.ರಸ್ತೆಗಳನ್ನು ಮೇಲ್ದರ್ಜೆಗೇರಿಸಿ, ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿದೆ.

2005–06, 2006–07 ಹಾಗೂ 2007–08 ರಲ್ಲಿ 8,597.83 ಕಿ.ಮೀ ಉದ್ದದ ಜಿಲ್ಲಾ ಪಂಚಾಯತ್ ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆಗೆ ವಹಿಸಿಕೊಳ್ಳಲಾಗಿದೆ.

ಆ ಲೋಕೋಪಯೋಗಿ ಇಲಾಖೆ ವಹಿಸಿಕೊಳ್ಳದಿದದ್ದರೆ ಕಾರಣವೇನು (ವಿವರ ನೀಡುವುದು)

ಮೇಲ್ದರ್ಜೆಗೇರಿಸಿದ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯು ವಹಿಸಿಕೊಂಡಿರುತ್ತದೆ.